

**◆ ಹೈದರಾಬಾದ್ ಕರ್ನಾಟಕದವರಾದ ನೀವು ನೆಲೆಸಲು ಬೆಳಗಾವಿ ಆರಿಸಿಕೊಂಡಿರೇಕೆ?**

ವಿಜಯ ಸಾಸನೂರು ಗುಲ್ಬರ್ಗಕ್ಕೆ ಪೊಲೀಸ್ ಕಮಿಶನರ್ ಇದ್ದಾಗ, ಗಿರಡ್ಡಿ ಗೋವಿಂದರಾಜ, ನಾನು ಎಲ್ಲ ಸೇರಿ ನಾಟಕ–ಗೀಟಕ ಅಂತ್ಹೇಳಿ ಮಾಡಿಕೊಳ್ತಾ ಇದ್ವಿ. ಸಾಸನೂರು ಬರೀತಾ ಇದ್ದರಲ್ಲ, ಹಾಗಾಗಿ ಬಹಳ ಹತ್ತಿರ ಆದರು. ಅವರ ಹೆಂಡತಿ ಪೇಂಟಿಂಗ್ ಮಾಡ್ತಿದ್ದರು. ನನಗೂ ಪೇಂಟಿಂಗ್ ಇಂಟರೆಸ್ಟ್ ಇದ್ದಿದ್ದಕ್ಕಾಗಿ ಅವರ ಮನೆಯೊಳಗ ಕೂಡೋದು, ಊಟ ಮಾಡೋದು ಶುರುವಾಯಿತು. ಸಾಸನೂರು ಕನ್ನಡ ಕಲ್ಚರ್ ಡಿಪಾರ್ಟಮೆಂಟಿಗೆ ಬಂದರು. ಅವರಿಗೆ ಬೆಳಗಾವಿಯಲ್ಲಿ ಒಬ್ಬ ಅಸಿಸ್ಟೆಂಟ್ ಡೈರೆಕ್ಟರ್ ಬೇಕಾಗಿತ್ತು. ಅವರು 'ಕುಸನೂರರೇ, ಯಾಕ್ ಅಲ್ಲಿ ಕೂಡ್ತೀರಿ? ನಮ್ಮಲ್ಲಿ ಬರ್ರೀ' ಅಂತಂದ್ರು. ಆಗ ನಾನು ಎಜುಕೇಶನ್ ಡಿಪಾರ್ಟಮೆಂಟಿನ್ಯಾಗ ಇದ್ದೆ; ಬಿ.ಎಡ್. ಕಾಲೇಜದೊಳಗ ಫಿಲಾಸಫಿ ಆಫ್ ಎಜ್ಯುಕೇಶನ್ ಹೇಳ್ತಿದ್ದೆ. 'ಇಲ್ಲಿ ವಾರಕ್ಕ ಎರಡು ಪಿರಿಯಡ್ ಇರ್ತಾವ. ಆರಾಮ ಅದಾ. ಸುಮ್ಮನೆ ಓದಿಕೊಂಡು ಬರಕೊಂಡು ಇರ್ತೀನಿ. ನಮಗ ತಿಂಗಳಾನುಗಟ್ಟಲೇ ಸೂಟಿ ಇರ್ತಾವ' ಅಂದೆ. ಅಂದರೂ ಕೇಳಲಾರದೇನೇ ಆರ್ಡರ್ ಹಾಕಿ ಕರಸಿಕೊಂಡರು. ಹಂಗನೋಡಿದರ ನನಗ ಆ ಡಿಪಾರ್ಟಮೆಂಟಿಗೆ ಬರಲಿಕ್ಕೆ ಬೇಸಿಕ್ ಕ್ವಾಲಿಫಿಕೇಶನ್ನೇ ಇರಲಿಲ್ಲ. ಕನ್ನಡಾನ ನಾನು ಪ್ರೈಮರಿ ಸ್ಕೂಲಿನಾಗೂ ಓದಿದ್ದಿಲ್ಲ. ಫಸ್ಟ್ ಲಾಂಗ್ವೇಜ್ ಅಂಡ್ ಮದರ್‌ಟಂಗ್ ಉರ್ದು ಅಂತ ಬರೆಸಿ ಕಲಿತೋನು.